16	ಮಂಡ್ಯ	210	215
17	ಮೈಸೂರು	235	235
18	ರಾಯಚೂರು	151	153
19	ಶಿವಮೊಗ್ಗ	221	245
20	ತುಮಕೂರು	301	311
21	ಉತ್ತರಕನ್ನಡ	207	207
22	ಚಾಮರಾಜನಗರ	108	111
23	ದಾವಣಗೆರೆ	204	202
24	ಬಾಗಲಕೋಟೆ	163	163
25	ಗದಗ	106	106
26	ಹಾವೇರಿ	208	208
27	ಉಡುಪಿ	141	139
28	ಕೊಪ್ಪಳ	83	119
29	ರಾಮನಗರ	130	130
30	ಚಿಕ್ಕಬಳ್ಳಾಪುರ	128	130

ಜಗಳೂರು ತಾಲ್ಲೂಕಿನ ಪ್ರವಾಸಿ ತಾಣಗಳು

3197 (2564); ಶ್ರೀ ರಾಜೇಶ್ ಎಚ್.ಪಿ (ಜಗಳೂರು)

ಅ) ಜಗಳೂರು ತಾಲ್ಲೂಕಿನಲ್ಲಿರುವ ಪ್ರಸಿದ್ಧ ಪ್ರವಾಸಿ ತಾಣಗಳಾದ ಉಚ್ಚಂಗಿದುರ್ಗ, ಕೊಡದಗುಡ್ಡ, ಕೊಣಚಗಲ್, ಮಡ್ರಳ್ಳಿ ಪ್ರದೇಶಗಳು ಮೂಲಭೂತ ಸೌಕರ್ಯಗಳಿಲ್ಲದೆ ನಿರ್ಲಕ್ಷ್ಯಕ್ಕೊಳಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಪೂರ್ಣ ವಿವರ ಒದಗಿಸುವುದು)?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಪ್ರವಾಸಿ ತಾಣಗಳಲ್ಲಿ ಕೆಲವು ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆ.

ಆ) ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಮೊತ್ತ
1	ಉಚ್ಚಂಗಿದುರ್ಗದಲ್ಲಿ ಯಾತ್ರಿನಿವಾಸ ನಿರ್ಮಾಣ (2008-09)	49 63	49 63
2	ಜಗಳೂರು ತಾಲ್ಲೂಕಿನ ಕಣ್ಣುಪ್ಪ ಗ್ರಾಮದ ಶ್ರೀ ಗವಿಮರದ ಬಳಿ ಯಾತ್ರಿನಿವಾಸ ನಿರ್ಮಾಣ (2010-11)	129 65	129 65
3	ಜಗಳೂರು ತಾ ಸಿದ್ದಹಳ್ಳಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಡಾರ್ಮಿಟರಿ ನಿರ್ಮಾಣ (2013-14)	10.00	10 00
4	ಜಗಳೂರು ತಾಲ್ಲೂಕು ಕಲ್ಲೇದೇವರಪುರ ಕಲ್ಲೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ಹಾಗೂ ಸಾಮೂಹಿಕ ಶೌಚಾಲಯ ನಿರ್ಮಾಣ ಹಾಗೂ ಸ್ನಾನಗೃಹ (2014-15)	50 00	–
	ಒಟ್ಟು	239 28	189 28

ಶಾಲಾ ಮಕ್ಕಳಿಗೆ ಉಚಿತ ಹಾಲು ಸರಬರಾಜು

3198 (2282); ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗಪಟ್ಟಣ)

ಅ) ರಾಜ್ಯದ ಶಾಲೆಗಳಲ್ಲಿ ವಾರದ ಯಾವ ದಿನಗಳಲ್ಲಿ ಮಕ್ಕಳಿಗೆ ಉಚಿತವಾಗಿ ಹಾಲು ನೀಡಲಾಗುತ್ತಿದೆ;

ಆ) ಹಾಗಿದ್ದಲ್ಲಿ, ಶಾಲೆಗಳಿಗೆ ಸರಬರಾಜು ಮಾಡುತ್ತಿರುವ ಹಾಲಿನ ಪುಡಿಯನ್ನು ಸುರಕ್ಷಿತವಾಗಿಡಲು ಶೀತಲ ಕೇಂದ್ರದ ವ್ಯವಸ್ಥೆ ಇದೆಯೇ; ಹಾಗಿದ್ದಲ್ಲಿ ಹಾಲಿನ ಪುಡಿ ಶೇಖರಣೆಗೆ ಯಾವ ವ್ಯವಸ್ಥೆ ಕಲ್ಪಿಸಲಾಗಿದೆ; (ವಿವರ ನೀಡುವುದು)

ಇ) ಮಕ್ಕಳಿಗೆ ನೀಡುತ್ತಿರುವ ಪೌಡರ್ ಹಾಲಿನ ಗುಣಮಟ್ಟ ಪರೀಕ್ಷೆ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ ಎಷ್ಟು ತಿಂಗಳಿಗೊಮ್ಮೆ ಗುಣಮಟ್ಟ ಪರೀಕ್ಷೆ ಮಾಡಲಾಗುವುದು;